**ಓ.ಎಸ್.ನಂ. 294/2015**

**ಡಿ.ಡಬ್ಲ್ಯು:1**

ದಿನಾಂಕಃ 19-03-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಡಿ ಸಿ ವಾದಿ ಪರ ವಕೀಲರಿಂದಃ-**

ವಾದಿ ನನಗೆ ಗೊತ್ತು. ವಾದಿ ನನ್ನ ಚಿಕ್ಕಪ್ಪನ ಮಗಳು. ಅಂದರೆ 1 ನೇ ಪ್ರತಿವಾದಿಯ ಮಗಳು ಎಂದರೆ ಸರಿ. 3 ನೇ ಪ್ರತಿವಾದಿ ನನ್ನ ತಮ್ಮನಾಗಬೇಕು ಎಂದರೆ ಸರಿ. 5 ಮತ್ತು 6 ನೇ ಪ್ರತಿವಾದಿಗಳು ಚಂದ್ರು ರವರ ಮಕ್ಕಳು ಎಂದರೆ ಸರಿ. 1 ರಿಂದ 13 ನೇ ಪ್ರತಿವಾದಿಗಳು ಒಬ್ಬರಿಗೊಬ್ಬರು ಸಂಬಂಧಿಗಳು ಎಂದರೆ ಸರಿ. ವಾದಿಯು ಜಮೀನಿನಲ್ಲಿ ಭಾಗ ಬರಬೇಕೆಂದು ಈ ದಾವೆಯನ್ನು ಸಲ್ಲಿಸಿರುತ್ತಾರೆ. ದಾವಾ ಸ್ವತ್ತುಗಳು ನನ್ನ ತಂದೆಯಾದ ಗೋವಿಂದಪ್ಪನವರು ಮತ್ತು ವಾದಿಯ ತಂದೆಯಾದ ರಂಗಪ್ಪನವರು ಮಾಡಿದ ಆಸ್ತಿಗಳು ಎಂದರೆ ಸರಿ. ದಾವಾ ಸ್ವತ್ತುಗಳು ಕಡೂರು ತಾಲೂಕಿನ ನಾಗರಾಳು ಗ್ರಾಮಕ್ಕೆ ಸೇರಿದ ಸ್ವತ್ತುಗಳು ಎಂದರೆ ಸರಿ. ನನ್ನ ತಂದೆಯಾದ ಗೋವಿಂದಪ್ಪನವರು ಮತ್ತು ವಾದಿಯ ತಂದೆಯಾದ 1 ನೇ ಪ್ರತಿವಾದಿಯ ನಡುವೆ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ವಿಭಾಗ ಮಾಡಿಕೊಂಡಿರುವುದಿಲ್ಲ ಎಂದರೆ ಸರಿ. ನನ್ನ ಪರ ತಕರಾರನ್ನು ಸಲ್ಲಿಸುವಾಗ ಅದಕ್ಕೆ ಸಂಬಂಧಿಸಿದ ಮಾಹಿತಿಯನ್ನು ನನ್ನ ವಕೀಲರಿಗೆ ನಾನೇ ಸಲ್ಲಿಸಿರುತ್ತೇನೆ. 3 ನೇ ಪ್ರತಿವಾದಿಯು ಸಲ್ಲಿಸಿರುವ ತಕರಾರಿನ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ವಾದಿಯು 1 ನೇ ಪ್ರತಿವಾದಿಗೆ ಒಬ್ಬಳೇ ಮಗಳು ಎಂದರೆ ಸರಿ. ವಾದಿಯು ದಾವಾ ಹಾಕುವ ಮೊದಲು 1 ನೇ ಪ್ರತಿವಾದಿ ಹಾಗೂ ನನ್ನ ಬಳಿ ತನ್ನ ಪಾಲಿನ ಹಿಸ್ಸೆಯನ್ನು ಕೇಳಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಐಟಂ ನಂಬರ್ 1 ರಿಂದ 3 ರ ಖಾತೆಯು ನನ್ನ ಹೆಸರಿನಲ್ಲಿರುತ್ತದೆ ಎಂದರೆ ಸರಿ. 1 ನೇ ಪ್ರತಿವಾದಿಯ ಮೇಲೆ ನಾನು 1995 ರಲ್ಲಿ ಅಸಲು ದಾವಾ ನಂ. 107/1995 ರಂತೆ ಶಾಶ್ವತ ನಿರ್ಭಂದಕಾಜ್ಞೆ ಕೋರಿ ದಾವೆ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ದಾವೆಯಲ್ಲಿ 1 ನೇ ಪ್ರತಿವಾದಿಯಾದ ರಂಗಪ್ಪನವರು ಈ ದಾವೆಯ ಐಟಂ ನಂ. 1 ಮತ್ತು 2 ರ ಮೇಲೆ ಅಂದರೆ ನನ್ನ ಆಸ್ತಿಗೆ ಯಾವುದೇ ತಂಟೆ ತಕರಾರು ಮಾಡಬಾರದೆಂದು ಆದೇಶವಾಗಿತ್ತು ಎಂದರೆ ಸರಿ. 1 ನೇ ಪ್ರತಿವಾದಿಯು ಅಸಲು ದಾವಾ ನಂಬರ್ 107/1995 ರಲ್ಲಿ ತಕರಾರನ್ನು ಸಲ್ಲಿಸಿದ್ದರು ಎಂದರೆ ಸರಿ.

ಅಸಲು ದಾವಾ ನಂ. 107/1995 ರ ದಾವೆಯಲ್ಲಿ 1 ನೇ ಪ್ರತಿವಾದಿ ರಂಗಪ್ಪ ತನ್ನ ಪರ ತಕರಾರನ್ನು ಸಲ್ಲಿಸಿದ ನಂತರ ನಾನು ಊರಿನ ಪಂಚಾಯಿತಿದಾರರ ಸಮಕ್ಷಮ ನಾನು ಸದರಿ ದಾವೆಯನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆಂದು ಒಪ್ಪಿದ್ದರಿಂದ 1 ನೇ ಪ್ರತಿವಾದಿಯು ಸದರಿ ದಾವೆಯಲ್ಲಿ ನ್ಯಾಯಾಲಯಕ್ಕೆ

ಹಾಜರಾಗದೇ  ನಾನು ದಾವೆಯನ್ನು ವಾಪಸ್ಸು ತೆಗೆದುಕೊಳ್ಳದೇ ಇರುವುದರಿಂದ 1ನೇ ಪ್ರತಿವಾದಿಯ ಗೈರುಹಾಜರಿಯಲ್ಲಿ ದಾವೆಯು ನನ್ನ ಪರ ಡಿಕ್ರಿಯಾಗಿರುತ್ತದೆ ಎಂದರೆ ಸರಿಯಲ್ಲ.  ಈ ದಾವೆಯಲ್ಲಿಯೂ ಸಹ ವಾದಿಯು ಪಂಚಾಯಿತಿ ಮಾಡಿಸಿದಾಗ ದೇವಸ್ಥಾನದಲ್ಲಿ ಪಂಚಾಯಿತಿದಾರರ ಸಮಕ್ಷಮ ವಾದಿಗೆ ಪಾಲುಕೊಡುತ್ತೇನೆಂದು ಒಪ್ಪಿಕೊಂಡಿದ್ದೆ ಎಂದರೆ ಸರಿಯಲ್ಲ. ಪಂಚಾಯಿತಿದಾರರ ಸಮಕ್ಷಮ ನಾನು ಒಪ್ಪಿಕೊಂಡಂತೆ ನಾನು ವಾದಿಗೆ ಪಾಲುಕೊಡದಿದ್ದರಿಂದ ವಾದಿಯು ಈ ದಾವೆಯಲ್ಲಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ.

**(ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.)**

**ಮರುವಿಚಾರಣೆ ಇರುವುದಿಲ್ಲ.**

**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸ.ಇ.ಎ.ಒ.
Sd/-

**2 ನೇ.ಹೆ.ಪ್ರಃದಃನ್ಯಾಃದಂ.,ರವರು,**
**ಕಡೂರು.**